ಕೊಂದಿತ್ತು. ಅಳಲಿಕ್ಕೆ ಕಣ್ಣಲ್ಲಿ ನೀರೂ ಇರಲಿಲ್ಲ ಗೋಪಾಲಿಗೆ. ಆಸೆಯಿಂದ ದತ್ತಕಕ್ಕೆ ತೆಗೆದುಕೊಂಡು ಬಂದ ತೇಜುವನ್ನು ಯಾರು ನೋಡಿಕೊಳ್ಳಬೇಕು. ಅಮ್ಮನಿಗೆ ತುಂಬ ವಯಸ್ಸಾಗಿತ್ತು. ಮನರಂಜನೆಗೆ ಬೈಯೋಣವೆಂದರೆ ಸೊಸೆಯೂ ಸತ್ತು ಹೋಗಿದ್ದಳು.

ಕಪಿನಿಪತಿರಾಯರಿಗೆ ನಡೆದಾಡುವುದೂ ಕಷ್ಟವಾಗಿತ್ತು. ತಂಗಿಯರು ಅನಾಥ ತೇಜುವನ್ನು ಎಷ್ಟು ಅಂತ ನೋಡಿಯಾರು? ಇನ್ನೊಂದು ಮದುವೆಯಾಗು ಗೋಪಾಲಿ ಅಂದರು. ತಲೆ ಕೊಡವಿ ಬಿಟ್ಟ ಗೋಪಾಲಿ. ನಾನೇ ಹೋಗಿ ಅವಳು ಉಳಿದುಕೊಂಡು ಬಿಟ್ಟಿದ್ದರೇ? ಆ ಮನೆಯಲ್ಲಿ ಇನ್ನು ಗಿಲಕಿಯ ಸದ್ದು ಕೇಳಿಸಲಿಲ್ಲ. ಮುಸುರೆ ತಿಕ್ಕುವ ನರಸಮ್ಮ ಮೌನಿಯಾಗಿಬಿಟ್ಟಳು. ಗೋಪಾಲಿ ನುಗ್ಗಿಕೇರಿ ಹಣುಮಪ್ಪನ ಗುಡಿಗೆ ಹೋಗುವುದನ್ನೇ ಬಿಟ್ಟ. ಬದುಕು ಬರಡೆದ್ದು ಹೋಯಿತು. ಗೋಪಾಲಿ ಹಾಡು ಮರೆತು ಹೋದ. ತೇಜುವನ್ನು ಎತ್ತಿಕೊಂಡರೆ ಕಣ್ಣು ತುಂಬಿ ಬರುತ್ತೆ. ಅಂತ ಒಂದು ಬರಡು ಮುಂಜಾನೆಯಲ್ಲೇ ಅಮ್ಮ ಕೂಗಿಕೊಂಡದ್ದು. “ಅಯ್ಯೋ, ಇವರು ಹೋದಾಗದಲ್ಲೋ ಗೋಪಾಲಿ.”

ಸಿಡಿಲು ಪದೇಪದೆ ಬಡಿಯಬೇಕಾಗಿಲ್ಲ. ಕಪಿನಿಪತಿರಾಯರು ತೀರಿಕೊಂಡ ಆರು ತಿಂಗಳಿಗೆ ಸರಿಯಾಗಿ ಅಮ್ಮನಿಗೆ ಮೊಲೆ ಗಟ್ಟಿಯಾದವು. ಅದು breast cancer. ಗೋಪಾಲಿ ದಿಕ್ಕು ತೋಚದಂತೆ ಕುಳಿತುಬಿಟ್ಟ. ಇದೇನಾ ದೈವೀ ದುರ್ವಿಪಾಕ ಎಂದರೆ? ಒಂದು ಮನೆಯನ್ನು ಅದಿನ್ನೆಷ್ಟು ಕಾಡುತ್ತವೆ ಸಾವು.


## ರವಿ ಬೆಳಗೆರೆ

ಪತ್ರಕರ್ತ, ಅನುವಾದಕ, ಕತೆಗಾರ, ಕಾದಂಬರಿಕಾರ, ಟೀವಿ ನಿರೂಪಕ, ಸಂಭಾಷಣಕಾರ ರವಿ ಬೆಳಗೆರೆ ಬಳ್ಳಾರಿಯವರು. ಬಳ್ಳಾರಿ ಮತ್ತು ಧಾರವಾಡದಲ್ಲಿ ಅಧ್ಯಯನ. ಕೆಲವೇ ಕತೆಗಳನ್ನು ಬರೆದರೂ, ಅವು ಕನ್ನಡಕ್ಕೆ ಹೊಸದೆನ್ನುವಂತೆ, ವಿಶಿಷ್ಟವೆನ್ನುವಂತೆ ಮೂಡಿಬಂದಿವೆ. ಅವರ ಎಲ್ಲ ಕತೆಗಳು ‘ಒಟ್ಟಾರೆ ಕತೆಗಳು’ ಎಂಬ ಸಂಗ್ರಹದಲ್ಲಿ ಸೇರಿವೆ. ಜೀವನ ಚಿತ್ರ, ಅಪರಾಧ, ಸಿನಿಮಾ, ಇತಿಹಾಸ, ಅನುಭವ ಕಥನಗಳು ಸೇರಿದಂತೆ ಹತ್ತಾರು ವಿಷಯಗಳ ಕುರಿತು ಸುಮಾರು 85ಕ್ಕೂ ಹೆಚ್ಚು ಪುಸ್ತಕಗಳನ್ನು ಪ್ರಕಟಿಸಿದ್ದಾರೆ.